ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ

ಅಂಗೀಕರಿಸುವುದು

ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ, 2007 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 1.7.2007 ರಿಂದ ಸಾರಾಯಿ ನಿಷೇಧ ಮಾಡಿದ್ದರಿಂದ ಈ ಸಾರಾಯಿ ಮಾರಾಟ, ಸೀಸೆಗೆ ತುಂಬುವುದಕ್ಕಾಗಿ ಲೈಸೆನ್ಸ್‌ನ ಮಂಜೂರಾತಿ ಅಥವಾ ನವೀಕರಣದ ನಿಷೇಧದ ಅವಶ್ಯಕತೆ ಇದೆ. ಎರಡನೆಯದಾಗಿ, ಸಕಲೇಶಪುರ ಮತ್ತು ನೆಲಮಂಗಲದಲ್ಲಾದ ಸಾರಾಯಿ ದುರ್ಘಟನೆ ಹಿನ್ನಲೆಯಲ್ಲಿ ಕಲಬೆರೆಕೆ ತಡೆಯುವುದಕ್ಕ ಯಾವ್ಯಾವ ವ್ಯಕ್ತಿಗಳು ಆ ವೃತ್ತಿಯಲ್ಲಿ ತೊಡಗಿರುತ್ತಾರೋ ಅಂಥ ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳುವಂಥದ್ದು. ಮೂರನೆಯದಾಗಿ, KSRTC bus ಗಳಲ್ಲಿ ಕಳ್ಳ ಸಾಗಾಣಿಕೆ ಆದಂಥ ಸಂದರ್ಭದಲ್ಲಿ ನಾವು bus ಅನ್ನೇ seize ಮಾಡುತ್ತಿದ್ದೇವೆ. ಇದರಿಂದ ಪ್ರಯಾಣಿಕರಿಗೆಲ್ಲ ತೊಂದರೆಯಾಗುತ್ತಿತ್ತು. ಕಳ್ಳಸಾಗಾಣಿಕೆಯನ್ನು ಮಾಡುತ್ತಿದ್ದರೆ ಅವರ ಮೇಲೆ case ಹಾಕುವುದು ಎಲ್ಲ ಮಾಡುತ್ತೇವೆ. ಆದರೆ, bus ಅನ್ನು seize ಮಾಡುವುದೇನಿತ್ತು, ಅದನ್ನು

ಕೈಬಿಡಬೇಕೆನ್ನುವುದು ಇದೆ. KSRTC bus ಗಳಿಗೆ ಸಂಬಂಧಿಸಿದಂತೆ ಮಾತ್ರ ಈ ಬಿಲ್ ಅನ್ನು ತಂದಿದ್ದೇವೆ. ಅಬ್ಕಾರಿ licence ಹೊಂದಿರುವಂಥ distillery, brewery, winery 10 ಸಾವಿರ liter ಗಿಂತ ಹೆಚ್ಚು rectified spirit ಉಪಯೋಗಿಸುವ unit ಗಳು ತಮ್ಮ ವ್ಯವಹಾರವನ್ನು ಕಡ್ಡಾಯವಾಗಿ cost Accountant ರವರಿಂದ ತಪಾಸಣೆ ಮಾಡಿಸಬೇಕೆಂದು ಹೀಗೆ ಈ ಮೂರೂ ವಿಷಯಗಳನ್ನೊಳಗೊಂಡಂತೆ ತಿದ್ದುಪಡಿ ತಂದಿದ್ದೇವೆ. ದಯಮಾಡಿ ಇದಕ್ಕೆ ಅನುಮತಿ ಕೊಡಬೇಕೆಂದು ಕೋರುತ್ತೇನೆ. ಇದು ಬಹಳ ಸರಳವಾಗಿರುವಂಥದ್ದು ಇದೆ. ಇದರಲ್ಲಿ ವಿಶೇಷವಾದದ್ದೂ ಏನೂ ಇಲ್ಲ. ಚರ್ಚೆ ಮಾಡುವುದಕ್ಕೆ ಏನೂ ಇಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: KSRTC bus ನಲ್ಲಿ ಸಾರಾಯಿ ತೆಗೆದುಕೊಂಡು ಹೋದಾಗ ಅದನ್ನು seize ಮಾಡಿ ಅದನ್ನು ಬಿಡದೇ ತೊಂದರೆ ಮಾಡುತ್ತಿದ್ದರು ಎನ್ನುವುದಕ್ಕೆ ವಿನಾಯಿತಿ ಕೊಟ್ಟಿದ್ದೀರಿ. ಬೇರೆ vehicle ಗಳ ಮೇಲೆ ಯಾವುದೇ ರೀತಿಯ ಕಠಿಣ ಕ್ರಮ ಜರುಗಿಸಿ. ಏಕೆಂದರೆ, ಅಲ್ಲಿ ಹೋಗಿ ಒಂದು ಸಲ seize ಮಾಡಿದ ಮೇಲೆ ಹತ್ತಾರು ವರ್ಷಗಳ ಕಾಲ ಅದು ಅಲ್ಲಿಯೇ ಬಿದ್ದಿರುತ್ತದೆ. ಇದು national waste. ಅದು bus ಇರಬಹುದು, car ಇರಬಹುದು, ಯಾವುದೇ vehicles ಅನ್ನು seize ಮಾಡುವುದನ್ನು ಅಥವಾ case ಅನ್ನು ಒಂದು ವಾರವೋ, 15 ದಿವಸಗಳೋ, ಒಂದು ತಿಂಗಳಲ್ಲಿಯೋ ಬೇಗ disburse ಮಾಡಿ ವಾಪಸ್ಸು ಕೊಟ್ಟರೆ ಸರಿ ಅಥವಾ ಬೇಕಾದರೆ ಆ Vehicle ಅನ್ನು ಸರ್ಕಾರದವರು seize ಮಾಡಿಕೊಳ್ಳಿ. ಅದು ಬಿಟ್ಟು ಹತ್ತಾರು ವರ್ಷಗಳ ಕಾಲ ಅಲ್ಲಿದ್ದ guard ಗಳು, ಅಲ್ಲಿದ್ದ ಪೊಲೀಸ್‌ನವರು tyre ಬಿಚ್ಚಿಕೊಂಡು ಹೋಗುವುದು, tape recorder ಬಿಚ್ಚಿಕೊಂಡು ಹೋಗುವುದು, ಕಡೆಗೆ ಬರೀ ಅದರ body ಮಾತ್ರ ಉಳಿದುಕೊಳ್ಳುತ್ತದೆ. ಅದಕ್ಕೋಸ್ಕರ ಇದನ್ನು KSRTC bus ಜೊತೆಗೆ ಬೇರೆ vehicles ಅನ್ನೂ ಸೇರಿಸಿಕೊಂಡು ನೀವು ಉಗ್ರವಾದ ಕ್ರಮ ಜರುಗಿಸಿ. ಇಲ್ಲದಿದ್ದರೆ ಸರ್ಕಾರಕ್ಕೇ ಅದನ್ನು ಉಪಯೋಗಿಸಿಕೊಳ್ಳಲಿ. ಸರ್ಕಾರಕ್ಕೆ ಏಕೆ ತೆಗೆದುಕೊಳ್ಳಬೇಕೆಂದರೆ ಅದು ಅನಗತ್ಯವಾಗಿ national waste ಆಗುತ್ತಿತ್ತು. ಅದು Bus, Lorry, Car ಇರಬಹುದು. ನಾವೇನು ಉತ್ಪಾದನೆ ಮಾಡುತ್ತಿದ್ದೆವು, ಆ ಉತ್ಪಾದನೆಯನ್ನು ಹಾಳು ಮಾಡುವುದು ಒಂದು

ಕಡೆಯಾಗುತ್ತದೆ. ಆದ್ದರಿಂದ, ಅದೊಂದನ್ನೂ ಆದರೂ ಪ್ರಯತ್ನ ಮಾಡಲಿಕ್ಕೆ ಯೋಚನೆ ಮಾಡಿ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: KSRTC bus ಎಂದು ಹೇಳುವ ಬದಲು ಯಾವುದೇ ವಾಹನವೆಂದು ಸೇರಿಸಿದ್ದರೆ ಆಗುತ್ತಿತ್ತು. KSRTC bus ಗೆ ಮಾತ್ರ ನೀವು ಈ ರೀತಿ ವಿನಾಯಿತಿ ಕೊಟ್ಟು ಬೇರೆ ಬಸ್‌ಗೆ ಕೊಡದಿದ್ದರೆ ಅದು ಸಮಸ್ಯೆಯಾಗಬಹುದು, ನೋಡಿ. ಅದಕ್ಕೇನಾದರೂ alternative ಯೋಚನೆ ಮಾಡಿ. ನಮಗೇನೂ ಇದರ ಬಗ್ಗೆ ಅಭ್ಯಂತರವಿಲ್ಲ. Discriminatory ಕಾಣುತ್ತಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಮಾಡಿರುವುದು ಒಳ್ಳೆಯದು ಎಂಬುದು ನನ್ನ ಭಾವನೆ. ಇದರ ಜೊತೆಗೆ ಖಾಸಗಿಯವರಿಗೂ bond ತೆಗೆದುಕೊಂಡು release ಮಾಡಿ ಅನಂತರ subject to court decision ಏನಾದರೂ ಮಾಡಲಿಕ್ಕೆ ಒಂದು ತೀರ್ಮಾನ ಮಾಡಿದರೆ ಒಳ್ಳೆಯದು. ವರ್ಷಗಟ್ಟಲೆ ಅಥವಾ case dispose ಆಗುವವರೆಗೆ, ಆ case ನಡೆಸುವವರೂ ನಿಮ್ಮ Excise Deputy Commissioner ರವರು, confiscate ಆದಂಥವು ಅವೇನೂ civil court ಗೆ ಹೋಗುವುದಿಲ್ಲ. ವರ್ಷಗಟ್ಟಲೆ case ಅನ್ನು ಎಳೆಯುತ್ತಾರೆ. ಒಂದು Motor cycle ನಲ್ಲಿ 2–3 bottle ಸಾರಾಯಿ ಸಿಕ್ಕಿದರೆ ಆ motor cycle ತೆಗೆದುಕೊಂಡು ಹೋಗಿ ನಿಲ್ಲಿಸಿಕೊಂಡರೆ ಒಂದು ವರ್ಷವಾದರೂ ಆ ಗಾಡಿ release ಆಗುವುದಿಲ್ಲ. ಎಂಥ Theft, murder case ಇರಲಿ, bond ಬರೆದುಕೊಟ್ಟು vehicle release ಮಾಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ತಾವೇನು confiscate ಮಾಡುತ್ತೀರಿ, ಆ vehicles ಅನ್ನು release ಮಾಡುವುದಕ್ಕೆ ಒಂದು provision ಮಾಡಿ. ಆಮೇಲೆ court ತೀರ್ಮಾನ ಏನಾಗುತ್ತದೋ ಅದರಂತೆ ಅನ್ವಯ ಆಗುವ ಹಾಗೆ ಮಾಡಬೇಕು. ಇವರು ತೀರ್ಮಾನ ಮಾಡುವವರೆಗೂ ತೆಗೆದುಕೊಂಡು ಹೋಗಿ D.C., Excise Office ಮುಂದೆ vehicle ನಿಲ್ಲಿಸುವುದು ಅಷ್ಟೇನೂ ಚೆನ್ನಾಗಿ ಕಾಣುವುದಿಲ್ಲ. ಅದು KSRTC ಅಥವಾ ಖಾಸಗಿ bus ಇರಲಿ. ಅದೊಂದು alternative ಅನ್ನು ತಾವು ಮಾಡಬೇಕು. ಆ Audit ಮಾಡಬೇಕೆನ್ನುವ ವಿಷಯ ಸ್ವಲ್ಪ contradictory ಆಗುವ ಹಾಗೆ

ಕಾಣುತ್ತದೆ. ಅದರ ಬಗ್ಗೆ ತಾವು ಸ್ವಲ್ಪ ಗಮನ ಹರಿಸಬೇಕು. Cost Accountant ರಿಂದ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು ಎಂದು ಏನು ಹೇಳಿದ್ದೀರಿ, Cost Accountant ಎಂದರೆ ಯಾರು ಎಂದು ನೀವು ಮತ್ತೆ define ಮಾಡಬೇಕಾಗುತ್ತದೆ. ನಿಯಮಿಸಬಹುದಾದಂಥ ಷರತ್ತು ಮತ್ತು ನಿರ್ಬಂಧಗಳಿಗೊಳಪಟ್ಟು ಪ್ರತಿಯೊಬ್ಬ ಲೈಸೆನ್ಸ್‌ದಾರನು, ಅಬ್ಕಾರಿ ಆಯುಕ್ತರು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮೊದಲು, ಒಂದು ಹಣಕಾಸು ವರ್ಷದ ಲೆಕ್ಕಗಳನ್ನು ಅಥವಾ ದಾಖಲೆಗಳನ್ನು ಒಬ್ಬ ಕಾಸ್ಟ್ ಅಕೌಂಟೆಂಟ್‌ರಿಂದ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು ಮತ್ತು ಅಬ್ಕಾರಿ ಆಯುಕ್ತರು ವಿಷದಪಡಿಸಿ, Chartered Accountant ಅಥವಾ ಕಾಸ್ಟ್ ಅಕೌಂಟೆಂಟಾ ಎಂದು ನೋಡಬೇಕು. ಸದರಿ Cost Accountant ರವರು ಕ್ರಮ ಬದ್ಧವಾಗಿ ಸಹಿ ಮಾಡಿರುವ ಮತ್ತು ಸತ್ಯಾಪನೆ ಮಾಡಿರುವ, ಅಂಥ ಲೆಕ್ಕ ಪರಿಶೋಧನೆಯ ವರದಿಯನ್ನು ನಿಯಮಿಸಲಾದ ನಮೂನೆಯಲ್ಲಿ ಆ ದಿನಾಂಕದೊಳಗೆ ಸಲ್ಲಿಸತಕ್ಕದ್ದು ಎಂದು ಇದೆ. ಈಗ Audit and Accounts service ಅಲ್ಲ. ಇದು Audit and Adjustment service ಆಗಿಬಿಟ್ಟಿದೆ. ಈ Audit and Adjustment service ಗೇ ನೀವು undertaking ಮಾಡುವುದಕ್ಕೆ ಕೊಡುವುದಾದರೆ ನಮ್ಮದೇನೂ ತಕರಾರು ಇಲ್ಲ. Audit and Accounts service ನಲ್ಲೇನಾದರೂ ಮಾಡಬೇಕು. private Auditor ಅನ್ನು ಇಟ್ಟುಕೊಳ್ಳುವುದೇ ಲೆಕ್ಕಗಳನ್ನು adjust ಮಾಡಿಸುವುದಕ್ಕೆ. ನಿಮಗೆ ಕೊಡುವುದಕ್ಕಲ್ಲ. ನೀವು flood gate open ಮಾಡಿ, ಅವರ ಕೈಯಲ್ಲಿ file ಮಾಡಿಸಿದರೆ ಸಾಕೆಂದು provision ಮಾಡಿದರೆ ಇದು ಸರಿಯೇ ನೋಡಿ. ನಿಮ್ಮ Excise Department ನವರಿಗೆ ಖಾಸಗಿಯವರು ಕೊಡುವ ಲೆಕ್ಕಗಳು ಸರಿ ಇರುತ್ತದೆಯೇ ಎಂದು ಇನ್ನೊಂದು ಸಲ ತಾವು ವಿಚಾರ ಮಾಡಬೇಕೆಂದು ಹೇಳುತ್ತೇನೆ. ಉಳಿದುದಕ್ಕೆ ನಮ್ಮ ತಕರಾರು ಇಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: KSRTC bus ಗಳನ್ನು ಬಿಟ್ಟು ಖಾಸಗಿ ಬಸ್‌ಗಳನ್ನು seize ಮಾಡಿದಾಗ ಇಲ್ಲಿ ಎರಡು ರೀತಿಯಾಗುತ್ತದೆ. ಕೆಲವೊಮ್ಮೆ bus owner ಗೆ ಗೊತ್ತಿಲ್ಲದಿದ್ದ ಹಾಗೆ ಯಾರೋ transport ಮಾಡುತ್ತಾರೆ, ಯಾವುದೋ bag ನಲ್ಲಿ ಇಟ್ಟುಕೊಂಡು ಹೋಗುತ್ತಾರೆ. ಹಾಗಿದ್ದಾಗ bus ಅನ್ನೇ confiscate ಮಾಡುವ ಸ್ಥಿತಿ ನಿರ್ಮಾಣವಾಗಬಾರದು. ಅದಕ್ಕೆ,

ಬಸ್‌ಗಳನ್ನು ಖಾಸಗಿ ವಾಹನದವರು regular ಆಗಿ ಇದನ್ನೇ ಮಾಡುತ್ತಿರುವವರ ವಾಹನವನ್ನು confiscate ಮಾಡಿ auction ಮಾಡಿ. ಅವರಿಗೇ ಕೊಡಬೇಡಿ. ಏಕೆಂದರೆ, ಇದನ್ನು release ಮಾಡಿದರೆ ಪುನಃ ಮಾಡುತ್ತಾರೆ. Public carriages ಅನ್ನು release ಮಾಡಲಿಕ್ಕೆ, undertaking bond ಬರೆಸಿಕೊಂಡು ಬಿಡುವಂಥ ವ್ಯವಸ್ಥೆಯಾಗಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ಸಾಲಿನಲ್ಲಿದ್ದಾಗ ಖೋಟಾ ನೋಟಿನ ಬಗ್ಗೆ ಚರ್ಚೆ ಮಾಡಿದ್ದೆವು. ಆದರೆ, ಅವರು ಅಧಿಕಾರಕ್ಕೆ ಬಂದ ಮೇಲೆ ತಾವೇನೂ ಕ್ರಮ ತೆಗೆದುಕೊಳ್ಳಲಿಲ್ಲ. ತಾವು ವಿರೋಧ ಪಕ್ಷದಲ್ಲಿದ್ದಾಗ ಅದರ ಬಗ್ಗೆ ಚರ್ಚೆ ಮಾಡಿ ಅಧಿಕಾರಕ್ಕೆ ಬಂದಾಗ ತಾವೇನಾದರೂ ಮಾಡುತ್ತೀರಿ ಎಂದು ನಾನು ಭಾವಿಸಿದ್ದೆ. ದಯವಿಟ್ಟು ಅದರ ಬಗ್ಗೆಯೂ ಗಮನ ಹರಿಸಬೇಕು. Public carriages ಬಗ್ಗೆ, ಕೇವಲ KSRTC ಅಲ್ಲ ಖಾಸಗಿ ವಾಹನಗಳು ಇಂಥದ್ದೇ regular ವ್ಯವಹಾರದಲ್ಲಿರುವಂಥವನ್ನು confiscate ಮಾಡಿ auction ಮಾಡಿ, ಹಣ ಇಟ್ಟುಕೊಳ್ಳಿ. case disposal ಆದ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: section 43(a) ಪ್ರಕಾರ private ನವರು bank guarantee ಕೊಟ್ಟು ತಕ್ಷಣ ಬಿಡುಗಡೆ ಮಾಡಿಸಿಕೊಂಡು ಹೋಗುವುದಕ್ಕೆ ಅವಕಾಶವಿದೆ. Government bus ಗಳಲ್ಲಿ ಆ ರೀತಿ ಅವಕಾಶವಿಲ್ಲ. ಅದಕ್ಕೋಸ್ಕರ ಇದೊಂದು ಅವಕಾಶ ಮಾಡಿಕೊಂಡಿದ್ದೇವೆ. ಯಾವನು ಬೇಕಾದರೂ Accountant ಹತ್ತಿರ ಲೆಕ್ಕ ಕೊಟ್ಟು ಏನು ಬೇಕಾದರೂ ಮಾಡುತ್ತಿದ್ದ. ಅದಕ್ಕೋಸ್ಕರ Cost Accountant ಆದರೆ ಜವಾಬ್ದಾರಿ ಇರುತ್ತದೆ. ಅವರೊಂದು ಸಲ certify ಮಾಡಿದ ಮೇಲೆ ನಾಳೆ ಹೆಚ್ಚು ಕಡಿಮೆ ಆದರೆ ಹಿಡಿದು ಕೇಳಬಹುದು ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ದಯಮಾಡಿ, ಇದಕ್ಕೆ ಅನುಮತಿ ನೀಡಬೇಕು.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಒಳ್ಳೆಯ ಉದ್ದೇಶದಿಂದ ಸಾರಾಯಿ ನಿಷೇಧ ಮಾಡಲಾಗಿದೆ. ಆದರೆ, ದಂಡ ಓಬಿರಾಯನ ಕಾಲದ್ದೇ ಇದೆ. 200 ರೂಪಾಯಿ ದಂಡ ಹಾಕುವುದು, 2 ವರ್ಷದ 6 ತಿಂಗಳು ಕಾರಾಗೃಹ ವಾಸ ಎಂದರೆ ಯಾರೂ ಈ ಕಳ್ಳಭಟ್ಟಿ ದಂಧೆ ನಿಲ್ಲಿಸುವುದಿಲ್ಲ.

ಅದಕ್ಕೆ ಕಠಿಣವಾದ ಶಿಕ್ಷೆಯನ್ನು ವಿಧಿಸುವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ದಂಡ ಹೆಚ್ಚಿಸಬೇಕು ಮತ್ತು ಕಾರಾಗೃಹ ಶಿಕ್ಷೆ ಹೆಚ್ಚಿಸಬೇಕು. ಕನಿಷ್ಠ 6 ತಿಂಗಳು ಜಾಮೀನು ಸಿಗದ ಹಾಗೆ ಮಾಡಬೇಕು. ಹಾಗಾದಾಗ ಮಾತ್ರ ನಿಯಂತ್ರಣಕ್ಕೆ ತರಬಹುದೇ ಹೊರತು ಇಲ್ಲದಿದ್ದರೆ ಬಾಗಿಲಲ್ಲಿ ಹೋಗಿ ಕಿಟಕಿಯಿಂದ ಬರುತ್ತದೆ. ಹಾಗಾಗಿ ಆ ದಂಡ ಮತ್ತು ಶಿಕ್ಷೆಯನ್ನು ಇನ್ನೂ ಹೆಚ್ಚು ವಿಸ್ತರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಮಾನ್ಯ ಅಧ್ಯಕ್ಷರೆ, ಈಗ ನಡೆಯುತ್ತಿರುವ ದಂಧೆಗಳನ್ನು ಹತೋಟಿ ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದು ಮತ್ತೆ ಮುಂದುವರಿದರೆ, ಇದರ ಬಗ್ಗೆ ಬಿಗಿ ಕ್ರಮ ತೆಗೆದುಕೊಳ್ಳತಕ್ಕಂಥದು ಅನಿವಾರ್ಯವಾಗುತ್ತದೆ. ಮಾನ್ಯ ಸದಸ್ಯರು ಈಗ ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುವುದರ ಜೊತೆಗೆ ಸದನವನ್ನು ಈ ವಿಷಯಕ್ಕೆ ಸಂಬಂಧಪಟ್ಟಂತೆ ವಿಶ್ವಾಸಕ್ಕೆ ತೆಗೆದುಕೊಂಡು ಏನು ಮಾಡಬೇಕೆಂಬುದರ ಬಗ್ಗೆ ಕೊಡುವ ಸಲಹೆ ಮೇರೆಗೆ ಬಿಗಿ ಕ್ರಮ ತರುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಹಾಲಿ ಇರತಕ್ಕಂಥ ಅಬ್ಕಾರಿ ಕಾಯಿದೆಯಲ್ಲಿ non-bailable ಎಂದು ಇದೆ. ಈ ರೀತಿಯಾಗಿ illegal ಮಾಡತಕ್ಕಂಥದು it amounts to non-bailable offence ಎಂದು ಈಗಾಗಲೇ ಇದೆ. ಆದ್ದರಿಂದ, ಈಗ Excise Act ಪ್ರಕಾರ ಬೇಲ್ ಕೊಡುತ್ತಿಲ್ಲ. 35ರ ಪ್ರಕಾರ FIR ಹಾಕಿದರೆ it is a non-bailable offence ಎಂದು ಈಗಾಗಲೇ ಅದರಲ್ಲಿದೆ. Stringent Act ಈಗಾಗಲೇ ಬಂದಿದೆ. ಮತ್ತೆ 43(a) ಪ್ರಕಾರ ಬ್ಯಾಂಕ್ ಗ್ಯಾರಂಟಿ ಪಡೆದುಕೊಂಡು ಖಾಸಗಿ ವಾಹನಗಳನ್ನು ಬಿಡಬಹುದು. Public carriages ಆದ KSRTC ವಾಹನಗಳಿಗೆ Concession ಕೊಡತಕ್ಕಂಥದು ಸೂಕ್ತವೆಂದು ನನ್ನ ಅಭಿಪ್ರಾಯ. ಆದರೆ, ಉಳಿದ ಯಾವುದೇ ವಾಹನಗಳಿಗೆ ಬ್ಯಾಂಕ್ ಗ್ಯಾರಂಟಿಯ ಮೇಲೆ ಬಿಡಬಹುದೆಂಬ ಅಧಿಕಾರ ಈಗಾಗಲೇ ಕಾಯಿದೆಯಲ್ಲಿರುವುದರಿಂದ ಈಗ Public carriages ಒಂದನ್ನು ಸೇರಿಸಿದರೆ ಸೂಕ್ತವೆನಿಸಬಹುದು. Valid permit public carriages ಗೆ ಇದ್ದರೆ ಎಂದು ಆಕ್ಟ್‌ನಲ್ಲಿ ಕೂಡ ಬಹಳ ಸ್ಪಷ್ಟವಾಗಿದೆ. without his knowledge ಏನಾದರೂ

ಕ್ಯಾರಿ ಮಾಡುತ್ತಿದ್ದರೆ Concession ಇದೆ. ಆದ್ದರಿಂದ, ಈ ಕಾಯಿದೆಯಲ್ಲಿ ಬಹಳ ಬದಲಾವಣೆ ಏನಿಲ್ಲ. ಇದು ಸೂಕ್ತವಿದೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾನು ಈಗಾಗಲೇ ಹೇಳಿದ ಹಾಗೆ section 43ರ ಪ್ರಕಾರ ಬಾಂಡ್ ಕೊಟ್ಟು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಇದೆ. ಸರ್ಕಾರಿ ಬಸ್‌ಗಳಿಗೋಸ್ಕರ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ ಹೊರತು ಬೇರೇನು ಕಾರಣ ಇದರಲ್ಲಿಲ್ಲ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:

"2007ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 6ರವರೆಗೆ

ಅಧ್ಯಕ್ಷರು:– "ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

"2007ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅನುಬಂಧ–1

2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2007 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು:– 2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

"2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು